**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:ಸಿ4(7)ಪ್ರೌಶಿ.ಶಿ.ಸಂ.ಆಯ್ಕೆ16/2013-14 ದಿನಾಂಕ: 14.08.2013

**ಅಧಿಸೂಚನೆ**

ವಿಷಯ: ರಾಜ್ಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಖಾಲಿ ಇರುವ ಶಿಕ್ಷಣ ಸಂಯೋಜಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ. ಇಡಿ 217.ಎಸ್.ಎಲ್.ಬಿ.2000 ದಿ:30-11-2000

2. ಈ ಕಛೇರಿ ಅಧಿಸೂಚನೆಯ ಸಂಖ್ಯೆ.ಅ1(2)ಶಿ.ಸಂ.ನೇ-26:2000-01 ದಿನಾಂಕ:18-12-2000

3. ಈ ಕಛೇರಿಯ ಜ್ಞಾಪನ ಸಂಖ್ಯೆ: ಸಿ4[7] ಪ್ರೌಶಿಶಿ ಸಂ ಆಯ್ಕೆ 16/2013-14 ದಿನಾಂಕ: 28.06.2013

*****

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಅರ್ಥಪೂರ್ಣವಾಗಿ ಸಂಯೋಜಿಸುವ ಉದ್ದೇಶದಿಂದ ಉಲ್ಲೇಖಿತ (1)ರ ಸರ್ಕಾರಿ ಆದೇಶದಲ್ಲಿ ಶಾಲಾ ತನಿಖಾಧಿಕಾರಿಗಳು ಹಾಗು ಶಿಕ್ಷಣ ಸಹಾಯಕರ ಹುದ್ದೆಗಳನ್ನು "ಶಿಕ್ಷಣ ಸಂಯೋಜಕರೆಂದು" ಪದನಾಮೀಕರಿಸಿ ಆದೇಶಿಸಲಾಗಿದೆ.

ಅದರಂತೆ ದಿನಾಂಕ:18.12.2000ರ ಆದೇಶದನ್ವಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಮತ್ತು ಇತರೆ ಸಂಯೋಜಕರುಗಳನ್ನು ಗರಿಷ್ಟ 5 ವರ್ಷಗಳ ಅವಧಿಗೆ ನೇಮಕ ಮಾಡಲಾಗಿತ್ತು. ಈಗ ಅವರುಗಳು 5 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರುವುದರಿಂದ ಉಲ್ಲೇಖ-3ರ ಪ್ರಕಾರ ಪುನ: ಮೂಲ ವೃಂದ ಅಂದರೆ ಪ್ರೌಢಶಾಲಾ ಸಹಶಿಕ್ಷಕರು ಮತ್ತು ಹಿರಿಯ ಪ್ರಾಥಮಿಕ ಶಾಲಾ ಪದವೀದರೇತರ ಮುಖ್ಯ ಶಿಕ್ಷಕರ ವೃಂದಕ್ಕೆ ವಾಪಸ್ಸು ಕಳುಹಿಸಿದ್ದು ಅವರ ಸ್ಥಾನಕ್ಕೆ ಹೊಸದಾಗಿ ಶಿಕ್ಷಣ ಸಂಯೋಜಕರನ್ನು ನೇಮಕ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ ಶಿಕ್ಷಣ ಸಂಯೋಜಕರ ಖಾಲಿ ಹುದ್ದೆಗಳನ್ನು ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತರ ಶಿಕ್ಷಣ ಸಂಯೋಜಕರನ್ನು ಒಳಗೊಂಡು ಪ್ರೌಢಶಾಲಾ ಸಹಶಿಕ್ಷಕರ ವೃಂದದಿಂದ, ಹಿರಿಯ ಪ್ರಾಥಮಿಕ ಶಾಲಾ ಪದವೀಧರೇತರ ಮುಖ್ಯ ಶಿಕ್ಷಕರ ವೃಂದದಿಂದ **ಲಿಖಿತ ಪರೀಕ್ಷೆ ನಡೆಸಿ ಆಯ್ಕೆ ಮೂಲಕ** ಭರ್ತಿ ಮಾಡಲು ಎಲ್ಲಾ ಉಪನಿರ್ದೇಶಕರು(ಆಡಳಿತ) ರವರಿಗೆ ಈ ಮೂಲಕ ಆದೇಶಿಸಿದೆ.

ಶಿಕ್ಷಣ ಸಂಯೋಜಕರ ಕಾರ್ಯ ವ್ಯಾಪ್ತಿ ಕೇಂದ್ರ ಸ್ಥಾನ, ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ದಿನಾಂಕ:18.12.2000ರ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಮುಂದುವರೆಯುತ್ತದೆ. ಏಕ ರೂಪ ಆಯ್ಕೆ ವಿಧಾನ ಕುರಿತು ಅನುಬಂಧದಲ್ಲಿ ವಿವರಿಸಲಾಗಿದೆ.

ಶಿಕ್ಷಣ ಸಂಯೋಜಕರ ಪರೀಕ್ಷೆ ಪ್ರಕ್ರಿಯೆ ಬಗ್ಗೆ ಪ್ರಶ್ನೆ ಪತ್ರಿಕೆ ತಯಾರಿಕೆ, ಮೌಲ್ಯಮಾಪನ ಹಾಗೂ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಇತ್ಯಾದಿ ಜವಾಬ್ದಾರಿಯನ್ನು ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು ಇವರಿಗೆ ವಹಿಸಿದ್ದು, ಕಾರ್ಯಸೂಚಿ ಪ್ರಕಾರ ತಕ್ಷಣಕ್ರಮ ವಹಿಸಲು ತಿಳಿಸಿದೆ.

**(ಮೊಹಮ್ಮದ್ ಮೊಹಸೀನ್)**
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, 100 ಅಡಿ ರಸ್ತೆ, ಬನಶಂಕರಿ 3ನೇ ಹಂತ ಹೊಸಕೆರೆಹಳ್ಳಿ ಬೆಂಗಳೂರು ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

3. ರಾಜ್ಯದ ಎಲ್ಲಾ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗಳ ಪ್ರಾಂಶುಪಾಲರು, ಇವರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರುಗಳಿಗೆ ಮಾಹಿತಿಗಾಗಿ.

**<u>ಪ್ರತಿಯನ್ನು ಮಾಹಿತಿಗಾಗಿ</u>**

5. ಮಾನ್ಯ ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ಇವರಿಗೆ ಸಲ್ಲಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
6. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ಅಪರ ಆಯುಕ್ತರು(ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
8. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಗುಲ್ಬರ್ಗಾ ಇವರಿಗೆ ಮುಂದಿನ ಕ್ರಮಕ್ಕಾಗಿ.
9. ನಿರ್ದೇಶಕರು, (ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
10. ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
11. ನಿರ್ದೇಶಕರು, ಉರ್ದು ಮತ್ತು ಭಾಷಾ ಅಲ್ಪ ಸಂಖ್ಯಾತ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು.
12. ನಿರ್ದೇಶಕರು, ಪರೀಕ್ಷೆಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
13. ರಾಜ್ಯದ ಎಲ್ಲಾ ಉಳಿದ ನಿರ್ದೇಶಕರುಗಳಿಗೆ.
14. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರು ಹಾಗು ಪದನಿಮಿತ್ತ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳು, ಗುಲ್ಬರ್ಗಾ/ಬೆಂಗಳೂರು/ಮೈಸೂರು/ಬೆಳಗಾಂ.
15. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂತು.
16. ಉಪನಿರ್ದೇಶಕರು, ಪ್ರೌಢ ಶಿಕ್ಷಣ/ಪ್ರಾಥಮಿಕ ಶಿಕ್ಷಣ/ಯೋಜನೆ, ಆಯುಕ್ತರ ಕಛೇರಿ, ಬೆಂಗಳೂರು.
17. ಆಯುಕ್ತರ ಕಛೇರಿಯ ಎಲ್ಲಾ ಶಾಖಾಧಿಕಾರಿಗಳಿಗೆ.
18. ಕಛೇರಿ ಪ್ರತಿ.

## ಅನುಬಂಧ

**1) ಶಿಕ್ಷಣ ಸಂಯೋಜಕರ ಹುದ್ದೆಗಳನ್ನು ಭರ್ತಿ ಮಾಡುವ ವಿಧಾನ:**

ಶಿಕ್ಷಣ ಸಂಯೋಜಕರು (ಪ್ರಾಥಮಿಕ ಕೇಡರ್) ರವರನ್ನು ಹಿರಿಯ ಪ್ರಾಥಮಿಕ ಶಾಲಾ ಪದವೀಧರೇತರ ಮುಖ್ಯ ಶಿಕ್ಷಕರ ವೃಂದದಿಂದ ಮತ್ತು ಶಿಕ್ಷಣ ಸಂಯೋಜಕರು (ಪ್ರೌಢಶಾಲಾ ಕೇಡರ್) ಕನ್ನಡ, ಉರ್ದು, ಮರಾಠಿ, ತೆಲುಗು ಮತ್ತು ತಮಿಳು ಇವರನ್ನು ಪ್ರೌಢಶಾಲಾ ಸಹ ಶಿಕ್ಷಕರ ವೃಂದದಿಂದ ಲಿಖಿತ ಪರೀಕ್ಷೆ ಮೂಲಕ ಆಯ್ಕೆಯಾದ ಶಿಕ್ಷಕರನ್ನು ಆಯಾ ಜಿಲ್ಲಾ ಉಪನಿರ್ದೇಶಕರು ಭರ್ತಿ ಮಾಡತಕ್ಕದ್ದು, ಇವರ ನೇಮಕಾತಿ ಅವಧಿ 03 ವರ್ಷದಿಂದ **ಗರಿಷ್ಟ 5 ವರ್ಷಗಳಿಗೆ ಸೀಮಿತವಾಗಿರುತ್ತದೆ.** ಈ ಅವಧಿಯಲ್ಲಿ ಅವರ ಕಾರ್ಯನಿರ್ವಹಣೆ ತೃಪ್ತಿಕರವಾಗಿರದಿದ್ದಲ್ಲಿ ಕೆ.ಸಿ.ಎಸ್.ಆರ್.ನಿಯಮಗಳಂತೆ ಕ್ರಮಕೈಗೊಳ್ಳಲಾಗುವುದು.

**2) ಶಿಕ್ಷಣ ಸಂಯೋಜಕರ ಅರ್ಹತೆ ಮತ್ತು ನೋಂದಣಿ:**

ಸರ್ಕಾರಿ ಪ್ರೌಢಶಾಲಾ ಕಲಾ/ವಿಜ್ಞಾನ/ಭಾಷಾ ಸಹ ಶಿಕ್ಷಕರ ವೃಂದದ ಶಿಕ್ಷಕರು ಹಾಗೂ ಪ್ರಾಥಮಿಕ ಶಾಲಾ ಪಧವೀದರೇತರ ಬಡ್ತಿ ಮುಖ್ಯ ಶಿಕ್ಷಕರು ಈ ಕೆಳಕಂಡ ಅರ್ಹತೆ ಆಧರಿಸಿ ಪರೀಕ್ಷೆಗೆ ನೊಂದಾಯಿಸಲು ಅರ್ಹರಾಗಿರುತ್ತಾರೆ.

1. ಸರ್ಕಾರಿ ಪ್ರೌಢಶಾಲಾ ಮತ್ತು ಭಾಷಾ ಅಲ್ಪ ಸಂಖ್ಯಾತ್ತರ ಶಿಕ್ಷಣ ಸಂಯೋಜಕರ ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಾಗಿ ಕನಿಷ್ಟ ಹತ್ತು ವರ್ಷಗಳ ಸೇವಾನುಭವವಿರಬೇಕು. ಆದರೆ ಪ್ರಾಥಮಿಕ ಶಿಕ್ಷಣ ಸಂಯೋಜಕರಿಗೆ ಈ ಷರತ್ತುಗಳು ಅನ್ವಯಿಸುವುದಿಲ್ಲ. ಏಕೆಂದರೆ ಹಿರಿಯ ಪ್ರಾಥಮಿಕ ಶಾಲಾ ಪಧವೀದರೇತರ ಮುಖ್ಯ ಶಿಕ್ಷಕರುಗಳು, ಈಗಾಗಲೇ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಮತ್ತು ಬಡ್ತಿ ಮುಖ್ಯ ಶಿಕ್ಷಕರಾಗಿ ಸೇವಾನುಭವ ಹೊಂದಿ ಜೇಷ್ಟತೆ ಆಧಾರದ ಮೇಲೆ ಪಧವೀದರೇತರ ಮುಖ್ಯ ಶಿಕ್ಷಕರಾಗಿ ಬಡ್ತಿ ಪಡೆದಿರುವುದರಿಂದ ಈ ಷರತ್ತಿನಿಂದ ವಿನಾಯಿತಿ ನೀಡಲಾಗಿದೆ.
2. ಶಿಕ್ಷಣ ಸಂಯೋಜಕರ ಆಯ್ಕೆ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕಕ್ಕೆ 50 ವರ್ಷಗಳ ವಯೋಮಿತಿ ಒಳಗಿರಬೇಕು.
3. ಕನ್ನಡ, ಉರ್ದು, ಮರಾಠಿ, ತೆಲುಗು, ತಮಿಳು ಅಲ್ಪ ಸಂಖ್ಯಾತ ಭಾಷಾ ಶಿಕ್ಷಣ ಸಂಯೋಜಕರ ಹುದ್ದೆಗೆ ಅರ್ಜಿ ಸಲ್ಲಿಸುವಂತಹ ಶಿಕ್ಷಕರು ಎಸ್.ಎಸ್.ಎಲ್.ಸಿ./ಪಿ.ಯು.ಸಿ./ಪದವಿಗಳಲ್ಲಿ ಆಯಾ ಭಾಷೆಯನ್ನು ಕಡ್ಡಾಯವಾಗಿ ಅಧ್ಯಯನ ಮಾಡಿರಬೇಕು.
4. ಶಿಕ್ಷಣ ಸಂಯೋಜಕರಾಗಿ 5 ವರ್ಷಗಳ ಕಾಲ ಎಕ್ಸಿಕ್ಯುಟೀವ್ ಸೇವೆ ಪೂರ್ಣಗೊಳಿಸಿದ ತರುವಾಯ ಅಂತಹವರು ತಮ್ಮ ವೃಂದವಾದ ಪಧವೀದರೇತರ ಮುಖ್ಯ ಶಿಕ್ಷಕರು ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದಕ್ಕೆ ಹಿಂದಿರುಗಿ ಮತ್ತೆ ಬೋಧನಾ ಕಾರ್ಯದಲ್ಲಿ ಕನಿಷ್ಟ 5 ವರ್ಷಗಳ ಸೇವೆ ಸಲ್ಲಿಸಿದ ನಂತರ ಹುದ್ದೆಗಳಿಗೆ ಪುನ: ಆಯ್ಕೆಗೆ ಅಧಿಸೂಚನೆ ನೀಡಿದಾಗ ವಯೋಮಿತಿಯೊಳಗೆ ಇದ್ದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
5. ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ 5 ವರ್ಷ ಪೂರ್ಣಗೊಳ್ಳದ ಹಾಗೂ ಪರೀಕ್ಷೆ ಮೂಲಕ ಆಯ್ಕೆಯಾಗದೆ ವರ್ಗಾವಣೆ / ಬಡ್ತಿ ಮೂಲಕ ಬಂದಿರುವ ಶಿಕ್ಷಣ ಸಂಯೋಜಕರು ಕೂಡ ಅರ್ಜಿ ಸಲ್ಲಿಸಿ ಪರೀಕ್ಷೆ ಮೂಲಕ ಆಯ್ಕೆಯಾಗಬೇಕಾಗುತ್ತದೆ.

ಮೇಲ್ಕಂಡ ಅರ್ಹತೆಗಳ ಆಧಾರದ ಮೇಲೆ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಶಿಕ್ಷಣ ಸಂಯೋಜಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸತಕ್ಕದ್ದು. ಇದಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಯ ಮೂಲಕ ಆಯಾ ಜಿಲ್ಲಾ ಉಪನಿರ್ದೇಶಕರು ವ್ಯಾಪಕ ಪ್ರಚಾರವನ್ನು ನೀಡುವುದು. ಈ ಸಂಬಂಧ ಜಿಲ್ಲಾ ಉಪನಿರ್ದೇಶಕರು ಒಂದು ಸುತ್ತೋಲೆಯನ್ನು ತಮ್ಮ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳಿಗೂ ಸಕಾಲದಲ್ಲಿ ಕಳುಹಿಸುವುದು. ಈ ಸುತ್ತೋಲೆಯಲ್ಲಿ ಪರೀಕ್ಷೆಯ ವಿಷಯ ಹಾಗು ವಿಧಿ ವಿಧಾನಗಳನ್ನು ಸ್ಪಷ್ಟವಾಗಿ ನೀಡುವುದು.

3 **ಶಿಕ್ಷಣ ಸಂಯೋಜಕರ ಆಯ್ಕೆಗಾಗಿ ಪರೀಕ್ಷೆ:**

ಶಿಕ್ಷಣ ಸಂಯೋಜಕರ ಆಯ್ಕೆಗೆ 90 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಹಾಗು 10 ಅಂಕಗಳಿಗೆ ಸೇವಾವಧಿ, ಉನ್ನತ ವ್ಯಾಸಂಗ, ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತರಿಗೆ ಮೌಲ್ಯಾಂಕನ ನೀಡಲಾಗುವುದು. ಲಿಖಿತ ಪರೀಕ್ಷೆ ವಸ್ತುನಿಷ್ಠ (Objective Type) ಮತ್ತು ಬಹು ಆಯ್ಕೆ (Multiple Choice) ಪ್ರಶ್ನೆಗಳನ್ನು ಮಾತ್ರ ಒಳಗೊಂಡಿರತಕ್ಕದ್ದು.

**'ಅ' ಲಿಖಿತ ಪರೀಕ್ಷೆ:–**

**ಭಾಗ–1**

ಪ್ರಸಕ್ತ ಶಿಕ್ಷಣ ವ್ಯವಸ್ಥೆ, ಪಠ್ಯ ಕ್ರಮ, ಕಲಿಕಾ ಪ್ರಕ್ರಿಯೆ, ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು, ಗುಣ ಮಟ್ಟದ ಸುಧಾರಣಾ ತಂತ್ರಗಳು, ಶೈಕ್ಷಣಿಕ ಮಾರ್ಗದರ್ಶನ, ಶೈಕ್ಷಣಿಕ ಮನೋವಿಜ್ಞಾನ, ಸೇರಿದಂತೆ ಶಿಕ್ಷಣ ಬಗ್ಗೆ ಪ್ರಾಥಮಿಕ ಜ್ಞಾನ ತಿಳಿಯಲು 30 ಅಂಕಗಳನ್ನು ನಿಗಧಿಪಡಿಸಿದೆ.

**'ಆ'ಭಾಗ–2**

**(ವಿಷಯವಾರು ಸಾಮಾನ್ಯ ತಿಳಿವಳಿಕೆ, 1 ರಿಂದ 8ನೇ ತರಗತಿಯ ಪಠ್ಯ ಪುಸ್ತಕ ಮತ್ತು ಪಠ್ಯ ವಸ್ತು ಆಧರಿಸಿ)**

| | | |
|---|---|---|
| 1) | ಕನ್ನಡ/ಉರ್ದು/ತಮಿಳು/ತೆಲುಗು ಇತ್ಯಾದಿ | 10 ಅಂಕಗಳು |
| 2) | ಇಂಗ್ಲೀಷ್ | 10 ಅಂಕಗಳು |
| 3) | ಗಣಿತ | 10 ಅಂಕಗಳು |
| 4) | ಸಮಾಜ ವಿಜ್ಞಾನ | 10 ಅಂಕಗಳು |
| 5) | ವಿಜ್ಞಾನ | 10 ಅಂಕಗಳು |
| 6) | ದೈಹಿಕ ಶಿಕ್ಷಣ, ಮೌಲ್ಯ ಶಿಕ್ಷಣ | 10 ಅಂಕಗಳು |

4 **ಉನ್ನತ ವ್ಯಾಸಂಗ ಪಡೆದವರಿಗೆ ಮೌಲ್ಯಾಂಕನ:**

| ಪ್ರಾಥಮಿಕ ಶಾಲಾ ಶಿಕ್ಷಕರು | ಅಂಕ | ಪ್ರೌಢಶಾಲಾ ಶಿಕ್ಷಕರು | ಅಂಕ |
|---|---|---|---|
| 1. ಪದವಿ | 01 | ಪಿ.ಎಚ್.ಡಿ | 01 |
| 2. ಬಿ.ಇಡಿ | 01 | ಎಂ.ಇಡಿ | 01 |
| 3. ಸ್ನಾತಕೋತ್ತರ ಪದವಿ | 01 | ಸ್ನಾತಕೋತ್ತರ ಪದವಿ | 01 |
| 4. ರಾಜ್ಯ ಮಟ್ಟದ ಹಾಗು ಅದಕ್ಕೂ ಮೇಲ್ಪಟ್ಟು ಪ್ರಶಸ್ತಿ ಪಡೆದಿದ್ದರೆ | 01 | ರಾಜ್ಯ ಮಟ್ಟದ ಹಾಗೂ ಅದಕ್ಕೂ ಮೇಲ್ಪಟ್ಟು ಪ್ರಶಸ್ತಿ ಪಡೆದಿದ್ದರೆ | 01 |
| 5. ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿದ್ದರೆ | 01 | ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿದ್ದರೆ | 01 |
| **ಒಟ್ಟು** | 05 | **ಒಟ್ಟು** | 05 |

**5. ಸೇವಾಹಿರಿತನಕ್ಕೆ ಮೌಲ್ಯಾಂಕನ:**

| | | |
|---|---|---|
| 1. | 10 ರಿಂದ 15 ವರ್ಷಗಳಿಗೆ | 1 ಅಂಕ |
| 2. | 16 ರಿಂದ 20 ವರ್ಷಗಳಿಗೆ | 2 ಅಂಕ |
| 3. | 21 ರಿಂದ 25 ವರ್ಷಗಳಿಗೆ | 3 ಅಂಕ |
| 4. | 26 ಹಾಗು ಅದಕ್ಕೂ ಮೇಲ್ಪಟ್ಟ ವರ್ಷಗಳಿಗೆ | 5 ಅಂಕ |

**6. ಆಯ್ಕೆ ಪ್ರಕ್ರಿಯೆಯ ಬಗ್ಗೆ ಕಾರ್ಯಸೂಚಿ**

| | | | |
|---|---|---|---|
| 1 | ಅಧಿಸೂಚನೆ ಹೊರಡಿಸುವುದು | ಆಯುಕ್ತರು | ದಿ:14-08-2013 |
| 2 | ಪತ್ರಿಕಾ ಪ್ರಕಟಣೆ | ಉಪನಿರ್ದೇಶಕರು(ಆಡಳಿತ) | ದಿ:16-08-.2013 |
| 3 | ನೊಂದಣಿ ಅಂತಿಮ ದಿನಾಂಕ | ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಆಸಕ್ತ ಶಿಕ್ಷಕರು | ದಿ:26.08.2013 |
| 4 | ಪ್ರಶ್ನೆ ಪತ್ರಿಕೆಗೆ ಬೇಡಿಕೆ ಡಿಎಸ್ಇಆರ್‌ಟಿಗೆ ಸಲ್ಲಿಸುವುದು. | ಡಯಟ್ ಪ್ರಾಂಶುಪಾಲರು ಹಾಗು ಜಿಲ್ಲಾ ಉಪ ನಿರ್ದೇಶಕರು | ದಿ:27.08.2013 |
| 5 | ಪರೀಕ್ಷಾ ಪ್ರಶ್ನೆ ಪತ್ರಿಕೆ ತಯಾರಿಕೆ ಮತ್ತು ಸರಬರಾಜು | ಡಿ.ಎಸ್.ಇ.ಆರ್.ಟಿ | ದಿ:31-08-2013 |
| 6 | ಲಿಖಿತ ಪರೀಕ್ಷೆ ದಿನಾಂಕ | ಡಯಟ್‌ಗಳ ಪ್ರಾಂಶುಪಾಲರುಗಳು ಹಾಗು ಡಯಟ್ ಸಂಸ್ಥೆಗಳು ಇಲ್ಲದಿರುವ ಜಿಲ್ಲೆಗಳಲ್ಲಿ ಜಿಲ್ಲಾ ಉಪನಿರ್ದೇಶಕರುಗಳು | ದಿ:07-09-2013 |
| 7 | ಮೌಲ್ಯ ಮಾಪನ | ಡಿಎಸ್ಇಆರ್‌ಟಿ | |
| 8 | ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ | ಡಿ.ಎಸ್.ಇ.ಆರ್.ಟಿ. | ದಿ:16-09-2013 |
| 9 | ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ | ಜಿಲ್ಲಾ ಉಪನಿರ್ದೇಶಕರುಗಳು ಮತ್ತು ಡಯಟ್‌ಗಳ ಪ್ರಾಂಶುಪಾಲರುಗಳು ಹಾಗು ಡಯಟ್ ಸಂಸ್ಥೆಗಳು ಇಲ್ಲದಿರುವ ಜಿಲ್ಲೆಗಳಲ್ಲಿ ಜಿಲ್ಲಾ ಉಪನಿರ್ದೇಶಕರುಗಳು | ದಿ:21.09.2013 |
| 10 | ಅಂತಿಮವಾಗಿ ಆಯ್ಕೆಯಾದ ಶಿಕ್ಷಕರಿಗೆ ಸ್ಥಳನಿಯುಕ್ತಿ ಆದೇಶ ನೀಡುವುದು | ಜಿಲ್ಲಾ ಉಪನಿರ್ದೇಶಕರು(ಆಡಳಿತ) | ದಿ:23.09.2013 |
| 11 | ತರಬೇತಿ | ನಿರ್ದೇಶಕರು,ಡಿ.ಎಸ್.ಇ.ಆರ್.ಟಿ. [ಡಯಟ್‌ಗಳ ಮುಖಾಂತರ] | |

**7. ಅನುಸರಿಸಬೇಕಾದ ಕ್ರಮಗಳು:**

90 ಅಂಕಗಳಿಗೆ ರಾಜ್ಯ ಮಟ್ಟದಲ್ಲಿ ಡಿಎಸ್ಇಆರ್‌ಟಿಯವರು ಪ್ರಶ್ನೆ ಪತ್ರಿಕೆ ಸಿದ್ಧಪಡಿಸುತ್ತಾರೆ. ಪರೀಕ್ಷೆಯು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಪ್ರಾಂಶುಪಾಲರ ಉಸ್ತುವಾರಿಯಲ್ಲಿ ನಡೆಯುತ್ತದೆ.

ಅರ್ಹತೆ ಇರುವ ಶಿಕ್ಷಕರು ತಾವು ಕಾರ್ಯ ನಿರ್ವಹಿಸುವ ಜಿಲ್ಲೆಯ ಎರಡು ಬ್ಲಾಕ್‌ಗಳಿಗೆ ಅಭಿಮತ (option) ತೋರಿಸಬೇಕು. ಆದರೆ ನೇಮಿಸಿದ ಯಾವುದೇ ಬ್ಲಾಕ್‌ನಲ್ಲಿ ಶಿಕ್ಷಣ ಸಂಯೋಜಕರಾಗಿ ಕಾರ್ಯನಿರ್ವಹಿಸಲು

ತಮ್ಮ ಹೆಸರನ್ನು ಸೇವಾ ದೃಢೀಕರಣ ತೋರಿಸಿ ನೊಂದಾಯಿಸಿಕೊಂಡು ನೊಂದಣಿ ಸಂಖ್ಯೆ ಪಡೆಯಬೇಕು. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕದ ಮರು ದಿನವೇ ಡಯಟ್ ಪ್ರಾಂಶುಪಾಲರಿಗೆ/ಉಪನಿರ್ದೇಶಕರಿಗೆ ನೋಂದಾಯಿತ ಅಭ್ಯರ್ಥಿಗಳ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುದ್ದಾಂ ತಲುಪಿಸಬೇಕು. ಈ ರೀತಿ ನೊಂದಾಯಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು/ಉಪನಿರ್ದೇಶಕರು (ಡಯಟ್ ಇಲ್ಲದ ಜಿಲ್ಲೆಗಳಲ್ಲಿ) ವೇಳಾ ಪಟ್ಟಿಯಂತೆ ಪ್ರಶ್ನೆ ಪತ್ರಿಕೆಗಾಗಿ ಡಿಎಸ್ಇಆರ್‌ಟಿ, ಬೆಂಗಳೂರು ರವರಿಗೆ ಬೇಡಿಕೆ ಸಲ್ಲಿಸಬೇಕು. ಬೇಡಿಕೆಗನುಗುಣವಾಗಿ ಡಿ.ಎಸ್.ಇ.ಆರ್.ಟಿ. ಪ್ರಶ್ನೆ ಪತ್ರಿಕೆ ಸರಬರಾಜು ಮಾಡುತ್ತದೆ.

ಪರೀಕ್ಷೆಯನ್ನು ಈಗಾಗಲೇ ನಿಗದಿಪಡಿಸಿದ ದಿನಾಂಕದಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಪ್ರಾಂಶುಪಾಲರ ಉಸ್ತುವಾರಿಯಲ್ಲಿ ನಡೆಸತಕ್ಕದ್ದು, ಜಿಲ್ಲಾ ಶಿಕ್ಷಣಮತ್ತು ತರಬೇತಿ ಸಂಸ್ಥೆ ಇಲ್ಲದಿರುವ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರದ ಯಾವುದಾದರೂ ಶಾಲೆಯಲ್ಲಿ ಜಿಲ್ಲಾ ಉಪನಿರ್ದೇಶಕರು ನಡೆಸತಕ್ಕದ್ದು. ಉತ್ತರ ಪತ್ರಿಕೆಗಳನ್ನು ಸ್ಪೀಡ್ ಪೋಸ್ಟ್/ಕೋರಿಯರ್ ಮೂಲಕ ಅದೇ ದಿನ ಶ್ರೀ.ಗಂಗಮಾರೇಗೌಡ, ಹಿರಿಯ ಸಹಾಯಕ ನಿರ್ದೇಶಕರು,ಸರ್ವ ಶಿಕ್ಷಣ ಅಭಿಯಾನ ಶಾಖೆ, ಹೊಸಕೆರೆಹಳ್ಳಿ, ಬನಶಂಕರಿ 3 ನೇ ಹಂತ, ಬೆಂಗಳೂರು –560082 ಇವರಿಗೆ ಕಳುಹಿಸುವುದು.

8. **ಮೌಲ್ಯಮಾಪನ:**

ನಿರ್ದೇಶಕರು, ಡಿಎಸ್ಇಆರ್‌ಟಿ ರವರ ನೇತೃತ್ವದಲ್ಲಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಿ ತಾತ್ಕಾಲಿಕ ಪಟ್ಟಿಯನ್ನು ಅವರು ಗಳಿಸಿದ ಅಂಕಗಳ ಸಮೇತ ಪ್ರಕಟಿಸುವುದು.ಹಾಗೆಯೇ ಡಯಟ್ ಮತ್ತು ಉಪನಿರ್ದೇಶಕರು (ಆಡಳಿತ) ಕಛೇರಿಗಳಲ್ಲಿ ಪ್ರಕಟಿಸುವುದು.

ಅಂಕಗಳ ಆಧಾರದ ಮೇಲೆ ಪ್ರತಿ ಜಿಲ್ಲೆಯನ್ನು ಘಟಕವೆಂದು ಪರಿಗಣಿಸಿ, ಒಟ್ಟು ಅವಶ್ಯವಿರುವ ಶಿಕ್ಷಣ ಸಂಯೋಜಕರ ಹುದ್ದೆಗಳಿಗೆ ಅವರು ಗಳಿಸಿದ ಅಂಕಗಳ ಆಧಾರದ ಮೇಲೆ ಅಂತಿಮ ಆಯ್ಕೆ ಮಾಡಬೇಕು, ಜಿಲ್ಲೆಯನ್ನು ಘಟಕವೆಂದು ಭಾವಿಸಿ ಶಿಕ್ಷಕರನ್ನು ಜಿಲ್ಲೆಯಲ್ಲಿ ಲಭ್ಯವಿರುವ ಶಿಕ್ಷಣ ಸಂಯೋಜಕರ (ಪ್ರೌಢ ಶಾಲಾ ಮತ್ತು ಪ್ರಾಥಮಿಕ ಶಾಲಾ ಪದವೀಧರೇತರ ಮುಖ್ಯ ಶಿಕ್ಷಕರ, ಭಾಷಾ ಅಲ್ಪ ಸಂಖ್ಯಾತ ಶಿಕ್ಷಕರಿಗೆ ಜಿಲ್ಲಾ ಘಟಕ) ಹುದ್ದೆ ಅನುಸರಿಸಿ ಅಷ್ಟೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಜಿಲ್ಲೆಯಲ್ಲಿನ ಒಟ್ಟು ಹುದ್ದೆಗಳಲ್ಲಿ ಶೇ.25 ರಷ್ಟಕ್ಕೆ ಮಹಿಳೆಯರು, ಶೇ.15 ರಷ್ಟಕ್ಕೆ ಪ.ಜಾತಿ, ಶೇ.3 ರಷ್ಟು ಪ.ಪಂಗಡ ವರ್ಗದವರನ್ನು ಭರ್ತಿ ಮಾಡತಕ್ಕದ್ದು.

ಶೇಕಡಾ 50ರಷ್ಟು ಹೆಚ್ಚುವರಿ ಪಟ್ಟಿಯನ್ನು ತಯಾರಿಸುವುದು. ಯಾವುದೇ ಕಾರಣದಿಂದ ನಿಗದಿಪಡಿಸಿದ 5 ವರ್ಷಗಳ ಒಳಗೆ ಹುದ್ದೆಗಳು ಖಾಲಿಯಾದಾಗ ಈ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಅರ್ಹತೆ ಆಧಾರದ ಮೇಲೆ ಆಯಾ ಆಯುಕ್ತಾಲಯಗಳ ಆಯುಕ್ತರ ಅನುಮತಿ ಪಡೆದು ಸ್ಥಳನಿಯುಕ್ತಿ ಮಾಡುವುದು.

9. **ಅಂತಿಮವಾಗಿ ಆಯ್ಕೆಯಾದ ಶಿಕ್ಷಣ ಸಂಯೋಜಕರಿಗೆ ಸ್ಥಳನಿಯುಕ್ತಿ ಆದೇಶ:**

ಲಿಖಿತ ಪರೀಕ್ಷೆಯ ಮುಖಾಂತರ ಆಯ್ಕೆ ಮಾಡಿದ ಪ್ರಾಥಮಿಕ/ಪ್ರೌಢಶಾಲಾ ಹಾಗು ಭಾಷಾ ಅಲ್ಪ ಸಂಖ್ಯಾತರ ಕೇಡರ್ ಶಿಕ್ಷಣ ಸಂಯೋಜಕರಿಗೆ ಆಯ್ಕೆ ಪಟ್ಟಿ ಜೇಷ್ಠತೆ ಅನುಸರಿಸಿ ಕೌನ್ಸಿಲಿಂಗ್ ಆಧಾರದ ಮೂಲಕ ಸ್ಥಳನಿಯುಕ್ತಿ ಆದೇಶಗಳನ್ನು ಉಪನಿರ್ದೇಶಕರು (ಆಡಳಿತ) ನೀಡುವುದು.

10. **ಆಯ್ಕೆಯಾದ ಶಿಕ್ಷಣ ಸಂಯೋಜಕರಿಗೆ ತರಬೇತಿ:**

ಆಯ್ಕೆಯಾದ ಶಿಕ್ಷಣ ಸಂಯೋಜಕರಿಗೆ ಡಿಎಸ್ಇಆರ್‌ಟಿ ಮೂಲಕ ತರಬೇತಿ ನೀಡಲಾಗುವುದು. ತರಭೇತಿ ದಿನಾಂಕ ಮತ್ತು ಸ್ಥಳವನ್ನು ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.ರವರು ತಿಳಿಸುವರು.

(ಮೊಹಮ್ಮದ್ ಮೊಹಸಿನ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

\\10.96.135.22\e\e\est4\ramrao\1936_12 - copy.doc

**ಶಿಕ್ಷಣ ಸಂಯೋಜಕರಾಗಿ ಕಾರ್ಯ ನಿರ್ವಹಿಸಲು ನೊಂದಣಿಗಾಗಿ ಅರ್ಜಿ ನಮೂನೆ**

**(ಶಿಕ್ಷಣ ಸಂಯೋಜಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವ ಬ್ಲಾಕ್‌ನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು.)**

1) ಶಿಕ್ಷಕರ ಹೆಸರು :
2) ಜನ್ಮ ದಿನಾಂಕ ಮತ್ತು ವಯಸ್ಸು :
3) ವಿದ್ಯಾರ್ಹತೆ :
4) ಎಸ್.ಸಿ/ಎಸ್.ಟಿ/ಇತರೆ :
5] ಸೇವೆಗೆ ಸೇರಿದ ದಿನಾಂಕ :

(ಹೆಚ್ಚಿನ ವಿದ್ಯಾರ್ಹತೆ ಇದ್ದಲ್ಲಿ ವಿವರಗಳನ್ನು ತಿಳಿಸುವುದು)

| ಕ್ರಸಂ | ವಿದ್ಯಾರ್ಹತೆ | ವಿಶ್ವ ವಿದ್ಯಾನಿಲಯ | ತೇರ್ಗಡೆಯಾದ ವರ್ಷ ಮತ್ತು ರಿಜಿಸ್ಟರ್ ನಂಬರ್ |
|---|---|---|---|
| 1 | 2 | 3 | 4 |
| | | | |
| | | | |
| | | | |

6) ಹಾಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಯ ಹೆಸರು:
ಸ್ಥಳ / ಬ್ಲಾಕ್ / ಜಿಲ್ಲೆ

7) ಸರ್ಕಾರಿ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಿದ ಬಗ್ಗೆ ವಿವರಗಳು:

| ಕ್ರಸಂ | ಶಾಲೆಯ ಹೆಸರು | ಎಲ್ಲಿಂದ | ಎಲ್ಲಿಯವರೆಗೆ | ಒಟ್ಟು ಅವಧಿ |
|---|---|---|---|---|
| 1 | 2 | 3 | 4 | 5 |
| | | | | |
| | | | | |
| | | | | |

8) ಶಿಕ್ಷಣ ಸಂಯೋಜಕರಾಗಿ ಕಾರ್ಯ ನಿರ್ವಹಿಸಲು ಇಚ್ಛಿಸುವ : 1
ಜಿಲ್ಲೆಯೊಳಗಿನ 2 ಬ್ಲಾಕ್‌ಗಳನ್ನು ಆಧ್ಯತೆಯ ಮೇಲೆ ಹೆಸರಿಸುವುದು. : 2

9) ಶಿಕ್ಷಕರಾಗಿ ರಾಜ್ಯ / ರಾಷ್ಟ್ರ ಪ್ರಶಸ್ತಿ ಪಡೆದಿದ್ದ ವಿವರ.
(ಪ್ರಶಸ್ತಿ ಪತ್ರದ ದೃಢೀಕೃತ ಪ್ರತಿ ಲಗತ್ತಿಸುವುದು)

10) ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳ ವಿವರ
(ಪತ್ರಿಕೆಯ ಹೆಸರು, ಜೆರಾಕ್ಸ್ ಪ್ರತಿಯೊಂದಿಗೆ)

**ಶಿಕ್ಷಕರ ಸಹಿ.**

ಮೇಲ್ಕಂಡ ವಿವರಗಳನ್ನು ಸೇವಾಪುಸ್ತಕದ ಮೂಲಕ ಪರಿಶೀಲಿಸಿ ದಾಖಲೆಗಳನ್ನು ದೃಢೀಕರಿಸಲಾಗಿದೆ ಹಾಗೂ ಸದರಿ ಶಿಕ್ಷಕರ ಮೇಲೆ ಯಾವುದೇ ರೀತಿಯ ಇಲಾಖಾ/ನ್ಯಾಯಾಂಗ ವಿಚಾರಣೆಗಳು ಇರುವುದಿಲ್ಲ ಎಂದು ಧೃಢೀಕರಿಸಿದೆ.

**ಸ್ಥಳ:** **ಮುಖ್ಯ ಶಿಕ್ಷಕರು / ಉಪ ಪ್ರಾಂಶುಪಾಲರು,** **ಕ್ಷೇತ್ರ ಶಿಕ್ಷಣಾಧಿಕಾರಿಗಳು**
**ದಿನಾಂಕ:** **ಸರ್ಕಾರಿ ಪ್ರೌಢಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು.**